**ಕಾನೂನು ಪಾಲಿಸದ ಆಯುರ್ವೇದ, ಸಿದ್ಧ, ಯುನಾನಿ ಔಷಧ ತಯಾರಕರ ಲೈಸೆನ್ಸ್ ರದ್ದು**

ನವದೆಹಲಿ, ಅಕ್ಟೋಬರ್ 25, 2005

1945ರ ಔಷಧಗಳು ಹಾಗೂ ಪ್ರಸಾಧನಗಳ ನಿಯಮಗಳಡಿ ಪ್ರಕಟಿಸಲಾದ ಔಷಧಿ ತಯಾರಿಕೆಯ ಉತ್ತಮ ನಡೆವಳಿಕೆ ಅನುಸರಿಸದ ಆಯುರ್ವೇದ, ಯುನಾನಿ, ಸಿದ್ಧ ಔಷಧ ತಯಾರಕರು ತಮ್ಮ ಪರವಾನಗಿಯನ್ನು ಕಳೆದುಕೊಳ್ಳುವ ಸಾಧ್ಯತೆಗಳಿವೆ. ಆರೋಗ್ಯ ಸಚಿವಾಲಯದ ಆಯುಷ್ ಇಲಾಖೆಯು ಈ ಕುರಿತು ಸೂಚನೆಯನ್ನು ಹೊರಡಿಸಿದ್ದು, ನಿಯಮ ಉಲ್ಲಂಘಿಸುವ ಆಯುರ್ವೇದ, ಸಿದ್ಧ ಹಾಗೂ ಯುನಾನಿ ಔಷಧಿ ತಯಾಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಅವರ ಪರವಾನಗಿಯನ್ನು ರದ್ದುಗೊಳಿಸುವಂತೆ ರಾಜ್ಯ ಔಷಧ ಪರವಾನಗಿ ಪ್ರಾಧಿಕಾರಗಳಿಗೆ ನಿರ್ದೇಶಿಸಿದೆ.

ಔಷಧಿಗಳ ಮೇಲೆ ಅಂಟಿಸಲಾಗುವ ವಿವರಗಳು ನಿಯಮ 161 (1) ಹಾಗೂ (2)ಗೆ ಅನುಗುಣವಾಗಿ ಇರುವಂತೆ ನಿಗಾ ವಹಿಸಲು ರಾಜ್ಯ ಪರವಾನಗಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ. ವಿವರಗಳು ಅಧಿಕೃತ ಹಾಗೂ ಸಸ್ಯಗಳ ವೈಜ್ಞಾನಿಕ ಹೆಸರುಗಳೊಂದಿಗೆ ಔಷಧಿಯಲ್ಲಿ ಮಿಶ್ರಣ ಮಾಡಿದ ಎಲ್ಲ ಪದಾರ್ಥಗಳ ಪ್ರಮಾಣವನ್ನು ಒಳಗೊಂಡಿರಬೇಕಾಗಿದೆ. ಒಂದು ವೇಳೆ ಔಷಧದ ಮೇಲೆ ಎಲ್ಲ ಪದಾರ್ಥಗಳ ಹೆಸರನ್ನು ಮುದ್ರಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಒಂದು ಚಿಕ್ಕ ಕರಪತ್ರದಲ್ಲಿ ಅವುಗಳ ವಿವರ ಮುದ್ರಿಸಿ ಔಷಧದ ಪೊಟ್ಟಣದ ಜೊತೆ ನೀಡಬೇಕು.

ಔಷಧ ಹಾಗೂ ಪ್ರಸಾದನಗಳ ನಿಯಮ 1945ರ ಅನುಬಂಧ ಇ (1)ರಲ್ಲಿ ಉಲ್ಲೇಖವಾದ ಪದಾರ್ಥಗಳು ಔಷಧದಲ್ಲಿ ಬಳಕೆಯಾಗಿದ್ದಲ್ಲಿ ವೈದ್ಯರ ಸಲಹೆ ಮೇರೆಗೆ ಮಾತ್ರ ಸ್ವೀಕರಿಸಿ ಎಂಬ ಎಚ್ಚರಿಕೆ ವಾಕ್ಯವನ್ನು ಔಷಧಗಳ ಮೇಲೆ ಮುದ್ರಿಸಬೇಕು. ಈ ನಿಯಮಗಳನ್ನು ಪಾಲಿಸದ ಉತ್ಪಾದನಾ ಸಂಸ್ಥೆಗಳ ಪರವಾನಗಿಯನ್ನು ರಾಜ್ಯ ಪ್ರಾಧಿಕಾರಗಳು ರದ್ದುಗೊಳಿಸಿ ಔಷಧ ಹಾಗೂ ಪ್ರಸಾದನಗಳ ನಿಯಮ 1945ರ ಅನ್ವಯ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ.

ಉತ್ತಮ ತಯಾರಿಕಾ ನಡೆವಳಿಕೆಗಳಿಗೆ ಮನ್ನಣೆ ನೀಡುವುದು ಕಡ್ಡಾಯವಾಗಿದೆ ಎಂದು ಇಲಾಖೆ ಸೂಚಿಸಿದೆ.

******

ಅದ:ಪಚ:ಸು:ಟಿ.ಎಂ.ಎಸ್: ಬೆಂ:15:00 25-10-2005